# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 250(192) |
| ಸದಸ್ಯರ ಹೆಸರು | : | ಡಾ: ತಳವಾರ್ ಸಾಬಣ್ಣ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ದಿನಾಂಕ | : | 09.12.2025 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲ್ಯಾಣ ಕರ್ನಾಟಕದ ಕೇಂದ್ರ ಸ್ಥಾನವಾದ ಕಲಬುರಗಿ ನಗರದ ಕೇಂದ್ರ ಬಸ್ ನಿಲ್ದಾಣದ ಎದುರಿನ ರಸ್ತೆಯ ಮೇಲೆ ಇರುವ ವಾಹನಗಳ ದಟ್ಟಣೆ ಮತ್ತು ಅದರಿಂದ ಆಗುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಲ್ಯಾಣ ಕರ್ನಾಟಕದ ಕೇಂದ್ರ ಸ್ಥಾನವಾದ ಕಲಬುರಗಿ ನಗರದ ಕೇಂದ್ರ ಬಸ್ ನಿಲ್ದಾಣದ ಎದುರಿನ ರಸ್ತೆಯ ಮೇಲೆ ಇರುವ ವಾಹನಗಳ ದಟ್ಟಣೆ ಮತ್ತು ಅದರಿಂದ ಆಗುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಕೇಂದ್ರ ಬಸ್ ನಿಲ್ದಾಣದ ಎದುರಿನ ರಸ್ತೆಯ ಮೇಲೆ ಆಟೋಗಳು, ಬಸ್‌ಗಳು ಇನ್ನಿತರ ಖಾಸಗಿ ವಾಹನಗಳು ಒಂದೇ ಕಡೆ ಓಡಾಡುವುದರಿಂದ ಈ ರಸ್ತೆಯ ಮೇಲೆ ವಾಹನಗಳನ್ನು ನಡೆಸುವುದು ಮತ್ತು ಜನರು ಬಸ್ ನಿಲ್ದಾಣಕ್ಕೆ ಹೋಗುವುದು ಕಷ್ಟವೆನಿಸುವುದಿಲ್ಲವೇ; | ಕೇಂದ್ರ ಬಸ್ ನಿಲ್ದಾಣದ ಎದುರಿನ ರಸ್ತೆಯ ಮೇಲೆ ಆಟೋಗಳು, ಬಸ್‌ಗಳು ಇನ್ನಿತರ ಖಾಸಗಿ ವಾಹನಗಳು ಒಂದೇ ಕಡೆ ಓಡಾಡುವುದರಿಂದ ಆ ರಸ್ತೆಯ ಮೇಲೆ ವಾಹನಗಳನ್ನು ಚಲಾಯಿಸುವುದು ಮತ್ತು ಸಾರ್ವಜನಿಕರು ಬಸ್ ನಿಲ್ದಾಣಕ್ಕೆ ಹೋಗುವುದು ಕಷ್ಟವಾಗುತ್ತಿದೆ.<br><br>ಆದ್ದರಿಂದ ಆಟೋಗಳಿಗೆ ಬಸ್ ನಿಲ್ದಾಣದ ಎದುರುಗಡೆ ಸಂಚಾರ ಮಾಡದಂತೆ ಪರ್ಯಾಯ ಮಾರ್ಗ ಗುರುತಿಸಿ ಉಪಯೋಗಿಸಲಾಗುತ್ತಿದೆ ಹಾಗೂ ಕೇಂದ್ರ ಬಸ್ ನಿಲ್ದಾಣಕ್ಕೆ ಬರುವ ಭಾರಿ ವಾಹನಗಳು/ಸಂಚಾರಿ ವಾಹನಗಳಿಗಾಗಿ ಪರ್ಯಾಯ ರಸ್ತೆ ನಿರ್ಮಾಣದ ಕಾಮಗಾರಿಯು ನಿರ್ಮಿತಿ ಕೇಂದ್ರದಿಂದ ಕೈಗೊಳ್ಳಲಾಗುತ್ತಿದ್ದು, ಸದರಿ ಕಾಮಗಾರಿಯು ಪ್ರಗತಿಯಲ್ಲಿದೆ. |
| ಇ) | ಅದೇ ರಸ್ತೆಯ ಎಂ.ಎಸ್.ಕೆ.ಮಿಲ್ ಕೇಂದ್ರ ಬಸ್ ನಿಲ್ದಾಣ ವಲ್ಲಭಬಾಯಿ ಪಟೇಲ್/ತಿಮ್ಮಾಪುರ್ ಸರ್ಕಲ್, ಜಿಲ್ಲಾಧಿಕಾರಿ ಕಛೇರಿಯವರೆಗೆ ಪ್ಲೆ ಓವರ್ ನಿರ್ಮಾಣ ಮಾಡಿ ವಾಹನಗಳ ಜನದಟ್ಟಣೆ ಮತ್ತು ಜನರ ಪರದಾಟ ತಪ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ; | ಎಂ.ಎಸ್.ಕೆ ಮಿಲ್ ಗೇಟ್‌ಯಿಂದ ಎಸ್.ವಿ.ಪಿ. ವೃತ್ತದವರೆಗೆ ಕೇಂದ್ರ ಬಸ್ ನಿಲ್ದಾಣದ ಮಾರ್ಗವಾಗಿ ರಸ್ತೆ ಅಭಿವೃದ್ಧಿ ಕಾಮಗಾರಿಗಳು 2024-25 ರಿಂದ 2026-27 ನೇ ಸಾಲಿಗೆ ಸಂಬಂಧಿಸಿದಂತೆ ಎಂ.ಜಿ.ಎನ್.ವಿ.ವೈ-2ರ ಮೊತ್ತ ರೂ.2.00 ಕೋಟಿ ಅನುದಾನವು ಮಂಜೂರಾಗಿರುತ್ತದೆ. ಸದರಿ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |
| ಈ) | ಪ್ಲೆ ಓವರ್‌ನ ನಿರ್ಮಾಣ ಮಾಡಲು ಕೆ.ಕೆ.ಆರ್.ಡಿ.ಬಿ ಯ ಹಣವನ್ನು ಬಳಸಿಕೊಂಡು ಪ್ಲೆ ಓವರ್ ನಿರ್ಮಾಣ ಮಾಡಿ ಕಲಬುರಗಿ ನಗರದಲ್ಲಿರುವ ವಾಹನಗಳ ದಟ್ಟಣೆ ನಿಯಂತ್ರಿಸಿ ಜನರಿಗೆ ಓಡಾಡಲು ಅವಕಾಶ ಮಾಡಿಕೊಳ್ಳಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ? | ಎಂ.ಎಸ್.ಕೆ. ಮಿಲ್ ಕೇಂದ್ರ ಬಸ್ ನಿಲ್ದಾಣ ವಲ್ಲಭಬಾಯಿ ಪಟೇಲ್/ತಿಮ್ಮಾಪುರ್ ಸರ್ಕಲ್, ಜಿಲ್ಲಾಧಿಕಾರಿ ಕಛೇರಿಯವರೆಗೆ ಪ್ಲೆ ಓವರ್ ನಿರ್ಮಾಣದ ಪ್ರಸ್ತಾವನೆಯು ಪ್ರಸ್ತುತ ಸರ್ಕಾರದ ಮುಂದೆ ಇರುವುದಿಲ್ಲ. |

**ಸಂಖ್ಯೆ: ನಅಇ 76 ಎಸಿಜಿ 2025 (ಇ)**

**(ಬಿ.ಎಸ್.ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ

ಸಚಿವರು